ಸಾರಾಯಿ ನಿಷೇಧದಿಂದ ಕಳ್ಳಭಟ್ಟಿ ದಂಧೆ ಹೆಚ್ಚಳ

712 (1089) ಶ್ರೀ ಖಾದರ್ ಯು.ಟಿ (ಮಂಗಳೂರು) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಸಾರಾಯಿ ನಿಷೇಧಿಸಿರುವುದರಿಂದ ಕಾಳಸಂತೆಯಲ್ಲಿ ಕಳ್ಳಭಟ್ಟಿ ದಂಧೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಳೆದ 3 ವರ್ಷಗಳಿಂದ ಕಳ್ಳಭಟ್ಟಿ ದಂಧೆಯ ಎಷ್ಟು ಪ್ರಕರಣಗಳು ದಾಖಲಾಗಿವೆ; (ಜಿಲ್ಲಾವಾರು ವಿವರ ಒದಗಿಸುವುದು);

ಇ) ಕಳ್ಳಭಟ್ಟಿಯನ್ನು ನಿಲ್ಲಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಹೌದು. ಕೆಲವು ಕಳ್ಳಭಟ್ಟಿ ದಂಧೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಳೆದ 3 ವರ್ಷಗಳಿಂದ ದಾಖಲಾಗಿರುವ ಕಳ್ಳಭಟ್ಟಿ ಪ್ರಕರಣಗಳ ಸಂಖ್ಯೆ ಒಟ್ಟು 7133 (ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ)

ಇ) ಕಳ್ಳಭಟ್ಟಿ ನಿಲ್ಲಿಸಲು ಸದರಿ ಸಮಸ್ಯೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಸಮಸ್ಯೆಯನ್ನು ಪೂರ್ಣವಾಗಿ ನಿವಾರಿಸುವತ್ತ ಕ್ರಮ ಜರುಗಿಸಲಾಗಿದೆ. ರಾಜ್ಯದಾದ್ಯಂತ ಇದ್ದಂತಹ ಕಳ್ಳಭಟ್ಟಿ ಕೇಂದ್ರಗಳನ್ನು ಸಣ್ಣ, ಮಧ್ಯಮ ಹಾಗೂ ದೊಡ್ಡ ಕೇಂದ್ರಗಳನ್ನಾಗಿ ವಿಂಗಡಿಸಿ ದೊಡ್ಡ ಕೇಂದ್ರಗಳ ಸಮಸ್ಯೆಯನ್ನು ನಿವಾರಿಸುವ ಜವಾಬ್ದಾರಿಯನ್ನು ಜಂಟಿ ಆಯುಕ್ತರು ಹಾಗೂ ಜಿಲ್ಲೆಯ ಉಪ ಅಯುಕ್ತರಿಗೆ ವಹಿಸಿಕೊಡಲಾಗಿದ್ದು, ಪ್ರತಿ ಕೇಂದ್ರದ ಭೌಗೋಳಿಕ, ಸಾಮಾಜಿಕ ಹಾಗೂ ಇತರೆ ಸಮಸ್ಯೆಗಳನ್ನು ಖುದ್ದಾಗಿ ಅಧ್ಯಯನ ಮಾಡಿ ಪ್ರತಿ ಕೇಂದ್ರಕ್ಕೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಕ್ರಿಯಾ ಯೋಜನೆಗಳ ಅನ್ವಯ ಈ ಕೇಂದ್ರಗಳ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಂಡಿದ್ದು, ಇದರ ಪರಿಣಾಮವಾಗಿ 2010–11ರ ಆರ್ಥಿಕ ವರ್ಷದ ಪ್ರಾರಂಭದಲ್ಲಿ 1930 ಕಳ್ಳಭಟ್ಟಿ ಕೇಂದ್ರಗಳು ಚಟುವಟಿಕೆಯಲ್ಲಿದ್ದು, ಅವುಗಳಲ್ಲಿ ಈಗಾಗಲೇ 1412 ಕಳ್ಳಭಟ್ಟಿ ಕೇಂದ್ರಗಳನ್ನು ನಿರ್ಮೂಲನೆ ಮಾಡಲಾಗಿದ್ದು, ಅಕ್ಟೋಬರ್ 2011ರ ಅಂತ್ಯಕ್ಕೆ ರಾಜ್ಯದಲ್ಲಿ 518 ಕಳ್ಳಭಟ್ಟಿ ಕೇಂದ್ರಗಳು

ಚಟುವಟಿಕೆಯಲ್ಲಿ ಇರುತ್ತವೆ. ಈ ಕೇಂದ್ರಗಳನ್ನು ಸಹಾ ಸಂಪೂರ್ಣವಾಗಿ ನಿರ್ಮೂಲನೆಗೊಳಿಸಲು ಕ್ರಿಯಾ ಯೋಜನೆಗಳನ್ನು ರೂಪಿಸಲಾಗಿದೆ ಹಾಗೂ ಜಾರಿ ಮತ್ತು ತನಿಖಾ ಕಾರ್ಯಗಳನ್ನು ಚುರುಕುಗೊಳಿಸಿ, ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲೆಯ ಕಂದಾಯ ಅಧಿಕಾರಿಗಳು ಹಾಗೂ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ ಇವರನ್ನು ಒಳಗೊಂಡ ಸಮನ್ವಯ ಸಮಿತಿ ಪ್ರತಿ ತಿಂಗಳು ಸಭೆ ನಡೆಸಿ, ಜಾರಿ ಮತ್ತು ತನಿಖೆ ಚಟುವಟಿಕೆ ಕಾರ್ಯವನ್ನು ಚುರುಕುಗೊಳಿಸಲಾಗಿದೆ. ಇದಲ್ಲದೆ ಸಾರ್ವಜನಿಕರು ಕಳ್ಳಭಟ್ಟಿ ಸೇವನೆಯಿಂದ ದೂರ ಇರಲು ಮತ್ತು ಕಳ್ಳಭಟ್ಟಿ ಸಮಸ್ಯೆ ನಿವಾರಣೆಗೆ ಅವರ ಸಹಕಾರ ಕೋರುವ ದಿಸೆಯಲ್ಲಿ ಸಹಾ ಕ್ರಮ ಜರುಗಿಸಲಾಗಿದೆ.

ಕಳ್ಳಭಟ್ಟಿ ದಂಧೆಯಲ್ಲಿ ತೊಡಗಿರುವ ಜನರನ್ನು ಈ ದಂಧೆಯಿಂದ ಬಿಡಿಸಿ, ಜೀವನೋಪಾಯಕ್ಕೆ ಬೇರೆ ಗೌರವಾನ್ವಿತ ಆರ್ಥಿಕ ಚಟುವಟಿಕೆಯಲ್ಲಿ ತೊಡಗಲು ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಅವರಿಗೆ ಸಾಲ–ಸೌಲಭ್ಯ, ಸಹಾಯಧನ ಇತ್ಯಾದಿ ದೊರಕಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕಳ್ಳಭಟ್ಟಿ ಸೇವನೆಯಿಂದ ಸಾರ್ವಜನಿಕರ ಆರೋಗ್ಯ ಹಾಗೂ ಜೀವ ಹಾನಿಉಂಟು ಮಾಡುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಕಳ್ಳಭಟ್ಟಿ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಮೂಲಕ ಅರಿವು ಮೂಡಿಸುತ್ತಿದ್ದು ಹಾಗೂ ಅಕ್ರಮಗಳನ್ನು ತಡೆಗಟ್ಟಲು ರಾಜ್ಯದಾದ್ಯಂತ 7318 ಗ್ರಾಮ ಪಂಚಾಯ್ತಿ/ವಾರ್ಡ್‌ಗಳಲ್ಲಿ ಗ್ರಾಮ ಸಭೆಗಳನ್ನು ಏರ್ಪಡಿಸಿ, ಸ್ತ್ರೀಶಕ್ತಿ ಸಂಘ, ಯುವಕ ಸಂಘ, ಚುನಾಯಿತ ಪ್ರತಿನಿಧಿಗಳು ಹಾಗೂ ಪ್ರಮುಖರನ್ನು ಒಳಗೊಂಡಂತೆ ತಿಳುವಳಿಕಾ ಕಾರ್ಯ ಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

ಕಂದಾಯ ಅಧಿಕಾರಿಗಳಿಗೆ ಜಮೀನು/ಕಟ್ಟಡಗಳ ಮಾಲೀಕರುಗಳಿಗೆ ಕರ್ನಾಟಕ ಅಬಕಾರಿ ಕಾಯ್ದೆ 1965 ರ ನಿಯಮ 50 ರಂತೆ ಮಾಹಿತಿ ನೀಡಲು ಕೋರಲಾಗಿದೆ.

ಎಲ್ಲಾ ಗ್ರಾಮ ಹಾಗೂ ಪ್ರದೇಶಗಳಲ್ಲಿ ಗಸ್ತು ತಿರುಗಲು 1891 ಬೀಟ್ ಗಳನ್ನಾಗಿ ವಿಂಗಡಿಸಿ, 16,871 ಪಾಯಿಂಟ್ ಪುಸ್ತಕಗಳನ್ನು ನಿರ್ವಹಿಸ ಲಾಗಿದೆ. ಈಗಾಗಲೇ ಅಕ್ರಮ ಚಟುವಟಿಕೆಗಳಲ್ಲಿ ಆರೋಪಿಗಳಾಗಿರುವ 25,905 ಆರೋಪಿಗಳಿದ್ದು, ಈ ಪೈಕಿ 20,867 ಆರೋಪಿಗಳನ್ನು ಗುರುತಿಸಲಾಗಿದ್ದು, ಸದರಿಯವರ ಚಲನವಲನಗಳ ಮೇಲೆ ಸಹಾ ನಿಗಾ ವಹಿಸಲಾಗುತ್ತದೆ.

ಅನುಬಂಧ –1

ಕ್ರ. ಸಂ	ಜಿಲ್ಲೆಗಳ ಹೆಸರು	ದಾಖಲಾದ ಕಳ್ಳಭಟ್ಟಿ ಪ್ರಕರಣಗಳು		
		2008-09	2009-10	2010-11
1	ಬೆಂ (ಪೂ)	–	–	–
	ಬೆಂ (ಪ)	7	–	–
	ಬೆಂ (ಉ)	2	1	–
	ಬೆಂ (ದ)	27	8	1
2	ಬೆಂ (ಗ್ರಾ)	4	5	–
3	ಬಾಗಲಕೋಟೆ	320	257	273
4	ಬೆಳಗಾವಿ	253	222	232
5	ಬಳ್ಳಾರಿ	57	53	18
6	ಬೀದರ್	126	65	69
7	ಬಿಜಾಪೂರ	124	126	197
8	ಚಾ.ನಗರ	12	19	5
9	ಚಿ.ಬಳ್ಳಾಪುರ	64	54	5
10	ಚಿ.ಮಗಳೂರು	202	290	195
11	ಚಿತ್ರದುರ್ಗ	105	21	46
12	ದ.ಕನ್ನಡ	62	36	9
13	ದಾವಣಗೆರೆ	104	60	31
14	ಧಾರವಾಡ	60	77	51
15	ಗದಗ	254	260	166
16	ಗುಲ್ಬರ್ಗಾ	124	183	117
17	ಹಾಸನ	92	176	157
18	ಹಾವೇರಿ	65	49	66
19	ಕೊಡಗು	35	62	48
20	ಕೋಲಾರ	139	72	47
21	ಕೊಪ್ಪಳ	6	5	3
22	ಮಂಡ್ಯ	1	1	0
23	ಮೈಸೂರು	7	32	13
24	ರಾಯಚೂರು	5	12	12
25	ರಾಮನಗರ	16	42	28
26	ಶಿವಮೊಗ್ಗ	125	119	107
27	ತುಮಕೂರು	94	114	83
28	ಉಡುಪಿ	7	1	4
29	ಉತ್ತರ ಕನ್ನಡ	56	57	62
30	ಯಾದಗಿರಿ	–	–	54
		2555	2479	2099